


ಅವಿಭಜಿತ ಆಂಧ್ರ ಪ್ರದೇಶದಲ್ಲಿ ಶೇಕಡಾ ೨೧ ಹಾಗೂ ಕರ್ನಾಟಕದಲ್ಲಿ ಶೇಕಡಾ ೨೩.೬ ರಷ್ಟು! ಈ ಪರಿಸ್ಥಿತಿ ಸುಧಾರಿಸಲು ಸಿದ್ದರಾಮಯ್ಯನವರು ಕೈಗೊಂಡ ಅತ್ಯುತ್ತಮ ಯೋಜನೆ ಅನ್ನಭಾಗ್ಯ.

ಪ್ರಸ್ತುತ ರಾಜ್ಯದಲ್ಲಿನ ಬಡತನ ರೇಖೆಗಿಂತಲೂ ಕೆಳಗಿನ ಆದ್ಯತಾ ಕುಟುಂಬಗಳಿಗೆ ಕುಟುಂಬದಲ್ಲಿನ ವ್ಯಕ್ತಿಗಳ ಆಧಾರದ ಮೇರೆಗೆ ಉಚಿತ ಆಹಾರ ಧಾನ್ಯದ ಜೊತೆಗೆ ರಿಯಾಯಿತಿ ದರದಲ್ಲಿ ಎರಡು ರೂಪಾಯಿಗೆ ಒಂದು ಕೆ ಜಿ ಐಯೋಡಿನ್‌ಯುಕ್ತ ಉಪ್ಪು, ೧೩.೫೦ ರೂ ಗಳಿಗೆ ಒಂದು ಕೆ ಜಿ ಸಕ್ಕರೆ ಹಾಗೂ ೨೫ ರೂ ಗಳಿಗೆ ಒಂದು ಲೀಟರ್ ತಾಳೆ ಎಣ್ಣೆ ಯನ್ನೂ ವಿತರಿಸಲಾಗುತ್ತಿದೆ.

## ಹಾಲಿನ ಹೊಳೆಯೊ..!

ಹಾಲು ಉತ್ಪಾದನೆಯ ವೆಚ್ಚ ದಿನೇ ದಿನೇ ಹೆಚ್ಚಾಗುತ್ತಿದೆ. ಹೀಗಾಗಿ ರೈತರಿಗೆ ಹಾಲು ಉತ್ಪಾದನೆಯಿಂದ ಬರುತ್ತಿರುವ ಆದಾಯ ಕಡಿಮೆಯಾಗುತ್ತಿದೆ. ಈ ವಾಸ್ತವವನ್ನು ಅರಿತ ಸಿದ್ದರಾಮಯ್ಯ ಅವರು ತಾವು ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಎರಡು ರೂಪಾಯಿ ಇದ್ದ ಪ್ರೋತ್ಸಾಹ ಧನವನ್ನು ನಾಲ್ಕು ರೂಪಾಯಿಗೆ ದುಪ್ಪಟ್ಟುಗೊಳಿಸಿದರು. ಸಿದ್ದರಾಮಯ್ಯ ಅವರ ಈ ಕ್ರಮದಿಂದ ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನದ ಹಾಲು ಉತ್ಪಾದನೆ ೭೨ ಲಕ್ಷ ಲೀಟರ್ ತಲುಪಿದೆ.

ರಾಜ್ಯದಲ್ಲಿ ಹಾಲು ಉತ್ಪಾದನಾ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡು ಬಂದೊಡನೆಯೇ ಸಿದ್ದರಾಮಯ್ಯ ಅವರ ಸರ್ಕಾರ ಅನುಷ್ಠಾನಕ್ಕೆ ತಂದ ಮತ್ತೊಂದು ಕ್ರಾಂತಿಕಾರಕ ಯೋಜನೆ ಕ್ಷೀರಭಾಗ್ಯ. ಅಂಗನವಾಡಿಯಲ್ಲಿನ ೪೦ ಲಕ್ಷ ಮಕ್ಕಳೂ ಒಳಗೊಂಡಂತೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ ಒಂದು ಕೋಟಿ ಐದು ಲಕ್ಷ ಮಕ್ಕಳಿಗೆ ವಾರಕ್ಕೆ ಮೂರು ದಿನ ೧೫೦ ಮಿಲಿ ಲೀಟರ್ ಹಾಲನ್ನು ಕುಡಿಯಲು ನೀಡುವ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಕಂಡು ಇಡೀ ರಾಷ್ಟ್ರವೇ

## ಯೋಜನೆ ರೂಪುಗೊಂಡದ್ದು ಹೇಗೆ?



ಅನ್ನಭಾಗ್ಯ ಹಾಗೂ ಕ್ಷೀರಭಾಗ್ಯ ನನ್ನ ಅನುಭವದ ಮೂಸೆಯಲ್ಲಿಯೇ ರೂಪುಗೊಂಡ ಯೋಜನೆಗಳು. ಬಡತನ ಎಂದರೆ ಏನು? ಎಂಬುದನ್ನು ನಾನು ನಿಘಂಟು ನೋಡಿ ತಿಳಿದಿಲ್ಲ. ಅನುಭವಿಸಿ ಅರಿತಿದ್ದೇನೆ. ನಾನು ಕೂಡಾ ಬಡತನದ ಹಿನ್ನೆಲೆಯಿಂದ ಬಂದವನು. ಮೈಸೂರು ಜಿಲ್ಲೆಯ ಸಿದ್ದರಾಮನ ಹುಂಡಿಯ ಇತರ ಕುಟುಂಬಗಳಿಗೆ ಹೋಲಿಸಿದರೆ ನಮ್ಮದು ಸ್ಥಿತಿವಂತರ ಕುಟುಂಬ ಎಂದೇ ಬಣ್ಣಿಸಬಹುದು. ಊರಲ್ಲಿ ಕೆಲವರ ಮನೆಯಲ್ಲಿ ಮಕ್ಕಳಿಗೆ ಜ್ವರ ಬಂದಾಗ, ನಮ್ಮ ಮನೆಗೆ ಬಂದು ಅನ್ನ ಮಾಡಲು ಅಕ್ಕಿ ಹಾಗೂ ಗಂಜಿ ಮಾಡಲು ರವೆ ಕೊಡುವಂತೆ ಮನವಿ ಮಾಡುತ್ತಿದ್ದರು. ಕಡುಬಡತನದ ಈ ಕಷ್ಟವನ್ನು ನಿವಾರಿಸುವವರು ಯಾರು? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದ ನನಗೆ, ಮುಖ್ಯಮುಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕ್ಷಣವೇ ಕಡುಬಡವರ ಕಷ್ಟ ನಿವಾರಿಸುವ ಶಕ್ತಿ ದೊರೆಯಿತು!

❖ ಮೈಸೂರಿನ ಯುವರಾಜ ಮಹಾವಿದ್ಯಾಲಯದಲ್ಲಿ ವಿಜ್ಞಾನ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಹಾಸ್ಟೆಲ್‌ನ ಪ್ರವೇಶ ದೊರೆಯದ ಹಿನ್ನೆಲೆಯಲ್ಲಿ ನಾನು ಮತ್ತು ನನ್ನ ಸಹಪಾಠಿ ಮೈಸೂರಿನಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದಿದ್ದೆವು. ಆ ಅವಧಿಯಲ್ಲಿ ಒಂದು ದಿನ ನಾನು ಮತ್ತೊಂದು ದಿನ ನನ್ನ ಗೆಳೆಯ ನಾವು ವಾಸವಿದ್ದ ಕೊಠಡಿಯಲ್ಲಿಯೇ ಅನ್ನ ಮಾಡಿಕೊಳ್ಳುತ್ತಿದ್ದೆವು. ಹೋಟೆಲ್‌ನಿಂದ ಸಾಂಬಾರ್ ತಂದುಕೊಳ್ಳುತ್ತಿದ್ದೆವು. ಪ್ರತಿದಿನವೂ ಹೋಟೆಲ್‌ನಿಂದ ಸಾಂಬಾರ್ ತರುವ ಕೆಲಸ ನನ್ನದಾಗಿತ್ತು. ಪಾತ್ರೆ ತೊಳೆಯುವ ಕೆಲಸ ಆತನದಾಗಿತ್ತು. ಹಾಸ್ಟೆಲ್‌ನಲ್ಲಿ ಸೀಟು ಸಿಗದಿದ್ದರೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅನುಭವಿಸುವ ಕಷ್ಟ ಏನು ಎಂಬುದನ್ನು ಸ್ವತಃ ಅನುಭವಿಸಿದ್ದೇನೆ. ನನ್ನ ಅನುಭವದ ಹಿನ್ನೆಲೆಯಲ್ಲಿಯೇ ವಿದ್ಯಾಸಿರಿ ಯೋಜನೆಯನ್ನು ರೂಪಿಸಿದ್ದೇನೆ.